(ಏ) ಮೈಸೂರು ವಲಯದಲ್ಲಿ ನಿರ್ಮಿಸಿರುವ ಚಾಕಿ ಸಾಗಾಣಿಕಾ ಕೇಂದ್ರಗಳ ಉಪಯೋಗ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) :— ಸನ್ಮಾನ್ಯ ಸಭಾಧ್ಯಕ್ಷರೇ, ರಾಜ್ಯದ ರೇಷ್ಮೆ ಇಲಾಖೆಯವರು ಮೈಸೂರು ಬಿತ್ತನೆ ವಲಯದಲ್ಲಿ ಕೋಟ್ಯಾಂತರ ರೂಪಾಯಿ ಹಣವನ್ನು ಖರ್ಚು ಮಾಡಿ ಮಾದರಿ ಚಾಕಿ ಸಾಗಣಿಕಾ ಕೇಂದ್ರಗಳೆಂದು ಒಳ್ಳೊಳ್ಳೆಯ ಫ್ರೈಮ್ ಲ್ಯಾಂಡಿನಲ್ಲಿ ಸಾಕಷ್ಟು ಬೆಲೆಬಾಳುವಂಥ ಕಟ್ಟಡಗಳನ್ನು ಕಟ್ಟಿದ್ದಾರೆ. ಇಲ್ಲಿ ಚಾಕಿ ಸಾಕಣೆ ಮಾಡಿ ಅವುಗಳನ್ನು ಮೈಸೂರು ಬಿತ್ತನೆ ವಲಯದ ರೇಷ್ಮೆ ಬೆಳೆಗಾರರಿಗೆ ವಿತರಣೆ ಮಾಡಬೇಕು ಎನ್ನುವುದು ಇದರ ಉದ್ದೇಶ. ಆದರೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಕಟ್ಟಿದಂಥ ಕಟ್ಟಡಗಳು ಮತ್ತು ಜಮೀನುಗಳು ಸುಮಾರು ಕಳೆದ ನಾಲ್ಕೈದು ವರ್ಷಗಳಿಂದ ಇಲಾಖೆಯವರಿಂದಲೂ ಉಪಯೋಗವಾಗುತ್ತಿಲ್ಲ ಮತ್ತು ಅವುಗಳನ್ನು ರೇಷ್ಮೆ ಬೆಳೆಗಾರರಿಗೂ ವಹಿಸಿಕೊಟ್ಟಿಲ್ಲ. ರೇಷ್ಮೆ ಇಲಾಖೆಯವರು ಈ ಮಾದರಿ ಚಾಕಿ ಸಾಕಣೆ ಕೇಂದ್ರಗಳಿಗೆಂದು ಮೈಸೂರು ಬಿತ್ತನೆ ವಲಯದಲ್ಲಿ ಕಟ್ಟಡಗಳನ್ನು ಕಟ್ಟಿದ್ದಾರೆ, ಅವುಗಳನ್ನು ಆ ಉದ್ದೇಶಕ್ಕಾಗಿ ಉಪಯೋಗಿಸಲಾಗುತ್ತಿದೆಯೇ ಅಥವಾ ಇವುಗಳನ್ನು ವಿಲೇವಾರಿ ಮಾಡಲು ಅಥವಾ ಇವುಗಳನ್ನು ಉಪಯೋಗಿಸಲು ಯಾವುದಾದರೂ ಯೋಜನೆಯನ್ನು ಸರ್ಕಾರದವರು ರೂಪಿಸಿದ್ದಾರೆಯೇ ಎನ್ನುವುದಕ್ಕೆ ಸರ್ಕಾರದವರು ದಯಮಾಡಿ ಉತ್ತರ ಕೊಡಬೇಕು ಎಂದು ತಮ್ಮ ಮೂಲಕ ಕೋರುತ್ತೇನೆ.

ಶ್ರೀ ಡಿ. ನಾಗರಾಜಯ್ಯ (ರೇಷ್ಮೆ ಇಲಾಖಾ ಸಚಿವರು) :— ಸನ್ಮಾನ್ಯ ಅಧ್ಯಕ್ಷರೇ, ಮೈಸೂರು ಬಿತ್ತನೆ ವಲಯದ ವ್ಯಾಪ್ತಿಯಲ್ಲಿ ಕುಣಿಗಲ್ ತಾಲ್ಲೂಕು, ತುಮಕೂರು ತಾಲ್ಲೂಕು ಮತ್ತು ಮಾಗಡಿ ತಾಲ್ಲೂಕಿನ ಕೆಲವು ಭಾಗಗಳನ್ನು ಗಮನಿಸಿದ್ದೇವೆ. ಅಲ್ಲಿ ಸುಮಾರು 4709 ಹೆಕ್ಟೇರ್ ಪ್ರದೇಶದಲ್ಲಿ 26773 ಜನ ರೇಷ್ಮೆ ಬೆಳೆಗಾರರಿದ್ದಾರೆ. ಶಾಸಕರು ಹೇಳಿದಂತೆ ಅಲ್ಲಿ 113 ಲಕ್ಷ ಹಣವನ್ನು ಖರ್ಚು ಮಾಡುವುದರ ಮೂಲಕ 50 ಚಾಕಿ ಕೇಂದ್ರಗಳನ್ನು ಪ್ರಾರಂಭ ಮಾಡಿದ್ದೇವೆ. 50 ಕೇಂದ್ರಗಳಲ್ಲಿ 34 ಪೂರ್ಣವಾಗಿವೆ, ಇನ್ನುಳಿದ 16 ವಿವಿಧ ಹಂತಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಬಿತ್ತನೆ ವಲಯದಲ್ಲಿ ಚಾಕಿ ಸಾಕುವುದರ ಮೂಲಕ ಒಳ್ಳೆಯ ಗುಣಮಟ್ಟದ ಹುಳಗಳನ್ನು ರೈತರಿಗೆ ಕೊಡಬೇಕು ಎನ್ನುವ ಉದ್ದೇಶವನ್ನಿಟ್ಟುಕೊಂಡು ಇದನ್ನು ಪ್ರಾರಂಭ ಮಾಡಿರತಕ್ಕಂಥಾದ್ದು. ಅಲ್ಲಿ ಸುಮಾರು 9500 ಜನ 'ಸಿ' ಮತ್ತು 'ಡಿ' ವರ್ಗದ ನೌಕರರು ಕಾರ್ಯ ನಿರ್ವಹಿಸುತ್ತಿದ್ದರು. ಆದರೆ ಹೈಕೋರ್ಟಿನ ಆದೇಶದ ಪ್ರಕಾರ ಬೇರೆಬೇರೆ ಇಲಾಖೆಗಳಿಗೆ ಅವರು ವರ್ಗಾವಣೆ-ಯಾಗಿರುವುದರಿಂದ ಈಗ ಅಲ್ಲಿ ಕೇವಲ ಒಂದು ಸಾವಿರ ನೌಕರರು ಮಾತ್ರ ಉಳಿದಿದ್ದಾರೆ. ಮೈಸೂರು ಬಿತ್ತನೆ ವಲಯದಲ್ಲಿ ಕೇವಲ 244 ಜನ 'ಡಿ' ದರ್ಜೆಯ ನೌಕರರು ಉಳಿದಿದ್ದಾರೆ. ಈ ಕಾರಣದಿಂದಾಗಿ, ನಾವು ಯಾವ ಉದ್ದೇಶವನ್ನು ಇಟ್ಟುಕೊಂಡು ಅವನ್ನು ಪ್ರಾರಂಭ ಮಾಡಿದೆವೋ ಆ ಉದ್ದೇಶವನ್ನು ನಾವು ಪರಿಪೂರ್ಣ ಮಾಡಲು ಆಗಲಿಲ್ಲ. ಅದಕ್ಕಾಗಿ ನಾವು 3800 ಹುದ್ದೆಗಳ ಮಂಜೂರಾತಿಗಾಗಿ ಆರ್ಥಿಕ ಇಲಾಖೆಗೆ

ಬರೆದಿದ್ದೇವೆ. ಅವುಗಳು ಮಂಜೂರಾದ ಕೂಡಲೇ ಈ ಕೇಂದ್ರಗಳನ್ನು ಪ್ರಾರಂಭ ಮಾಡಲು ಪ್ರಯತ್ನ ಮಾಡುತ್ತೇವೆ ಎನ್ನುವ ಆಶ್ವಾಸನೆಯನ್ನು ಈ ಸಂದರ್ಭದಲ್ಲಿ ಕೊಡುವುದರ ಜೊತೆಗೆ, ಒಂದು ವೇಳೆ ಅವುಗಳಲ್ಲಿ ನಾವು ವಿಫಲರಾದರೆ ಯಾವ್ಯಾವ ಜಾಗಗಳಲ್ಲಿ ನಾವು ಚಾಕಿ ಸಾಕಣಿ ಕೇಂದ್ರಗಳನ್ನು ಪ್ರಾರಂಭ ಮಾಡಿದ್ದೆವೋ ಅಂಥವುಗಳನ್ನು ಆ ಭಾಗದಲ್ಲಿರತಕ್ಕ ರೈತರಿಗೆ ಒಂದು ಸೊಸೈಟಿ ಮಾಡಿ, ಅದರ ಮುಖಾಂತರ ರೈತರಿಗೆ ಜವಾಬ್ದಾರಿ ವಹಿಸಿ ಅವರಿಗೆ ತಾಂತ್ರಿಕ ಸಲಹೆಯನ್ನು ನಮ್ಮ ಇಲಾಖೆಯ ವತಿಯಿಂದ ಕೊಟ್ಟು ಅವರು ಹುಳುಗಳನ್ನು ಸಾಕಿ, ಆ ಹುಳುಗಳನ್ನು ರೈತರಿಗೆ ವಿತರಣೆ ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಬೇಕು ಎನ್ನುವ ಕಾರ್ಯಕ್ರಮವನ್ನು ನಾವು ಅಳವಡಿಸಿಕೊಂಡಿರುವುದರಿಂದ, ನಾವು ಪ್ರಾರಂಭ ಮಾಡಿರುವಂಥ ಕೇಂದ್ರಗಳನ್ನು ಮುಂದಿನ ವರ್ಷದಿಂದ ಯಶಸ್ವಿಯಾಗಿ ಮಾಡಲು ಪ್ರಯತ್ನ ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ಆಶ್ವಾಸನೆ ಮಾಡುತ್ತೇನೆ.

ಅಧ್ಯಕ್ಷರು :— ಈಗ ಹಷ್ಮಿ ಮತ್ತು ಪವಾರ್‌ರವರು ಪ್ರಸ್ತಾಪ ಮಾಡಲಿ. ಮೇಲ್ಮನೆಯಲ್ಲಿ ಪ್ರಶ್ನೋತ್ತರ ವೇಳೆ ಇರುವುದರಿಂದ ಗೃಹ ಸಚಿವರು ಅಲ್ಲಿಗೆ ಹೋಗಬೇಕಾಗಿರುವುದರಿಂದ ಅವರಿಗೆ ಸಂಬಂಧಪಟ್ಟ ಎರಡು ವಿಷಯಗಳನ್ನು ಮುಗಿಸಿ ನಂತರ ಬೇರೆಯವುಗಳನ್ನು ತೆಗೆದುಕೊಳ್ಳುತ್ತೇನೆ. ಹಷ್ಮಿಯವರ ಒಂದು ನೋಟೀಸ್ ಮೊನ್ನೆಯಿಂದ ಪೆಂಡಿಂಗ್ ಇದೆ, ಮೊದಲು ಅವರೆಡು ಮುಗಿಯಲಿ. ಹಷ್ಮಿಯವರೆ, ಈಗ ನೀವು ಟಿಪ್ಪು ಸುಲ್ತಾನರ ವಿಷಯವನ್ನು ಪ್ರಸ್ತಾಪ ಮಾಡಿ. ನಂತರ, ಯೋಗೀಶ್‌ಭಟ್ ವಸಂತ ಸಾಲಿಯಾನ, ಪೂಜಾರಿ, ಪ್ರತಾಪಚಂದ್ರ ಶೆಟ್ಟಿ, ಮಲ್ಲಿಕಾರ್ಜುನ ಖರ್ಗೆ, ಶ್ರೀರಾಮರೆಡ್ಡಿ ಇವರೆಲ್ಲರ ನೋಟೀಸುಗಳಿದ್ದು ಆಮೇಲೆ ತೆಗೆದುಕೊಳ್ಳುತ್ತೇನೆ.

ಎ) ಟಿಪ್ಪುಸುಲ್ತಾನ್ ಮರಿಮಗನ ವಿಚಾರದ ಬಗ್ಗೆ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ (ಬೀದರ್) :— ಮಾನ್ಯ ಸಭಾಧ್ಯಕ್ಷರೆ, ಟಿಪ್ಪು ಸುಲ್ತಾನ್ ಮರಿ ಮಗನಾದ ಪ್ರಿನ್ಸ್ ಆಸಿಫ್ ಅಲಿಖಾ ಅವರು ಸುಮಾರು ಎರಡು ವರ್ಷಗಳಿಂದ ಕರ್ನಾಟಕದಲ್ಲಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :— ಮಾನ್ಯ ಅಧ್ಯಕ್ಷರೆ, ಟಿಪ್ಪು ಸುಲ್ತಾನ್ ಮರಿ ಮಗ ವಿಚಾರದಲ್ಲಿ ಈಗಾಗಲೇ ತಮ್ಮ ಕಛೇರಿಯಲ್ಲಿ ಸಭೆ ನಡೆಸಿದ್ದು, ಅವರನ್ನು ಕರೆಯಿಸಿ ಮಾತನಾಡಿದ್ದೇನೆ. ಇದಾದ ನಂತರ ನಮ್ಮ ಇಲಾಖಾಧಿಕಾರಿಗಳ ಜೊತೆಯಲ್ಲೂ ಮಾತನಾಡಿರುವುದರಿಂದ ತಾವು ಈ ವಿಷಯದ ಮೇಲೆ 10-20 ನಿಮಿಷಗಳ ಕಾಲ ನಿಗದಿಪಡಿಸಿ ಚರ್ಚಿಸಲು ಅವಕಾಶ ಮಾಡಿಕೊಟ್ಟರೆ ನಾನು ವಿವರವಾದ ಹೇಳಿಕೆ ಕೊಡುತ್ತೇನೆ. ನಂತರ, ಈ ವಿಚಾರದಲ್ಲಿ ಅವರ ಅಭಿಪ್ರಾಯವೇನಾದರೂ ಇದ್ದರೆ ಅದನ್ನು ಮಂಡಿಸಬಹುದು.